# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಫೋನ ನಂ-9448274619

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾ.ಮತ್ತು ಪಾ. ಉಪ-ವಿಭಾಗ ಗು.ವಿ.ಸ.ಕಂ.ನಿ
ಔರಾದ


ಸಂಖ್ಯೆ:ಔರಾದ/ಸ.ಕಾ.ಇಂ/ಹಿ.ಸ/15-16/ ದಿನಾಂಕ :-

## ಜನ ಸಂಪರ್ಕ ಸಭೆಯ ನಡುವಳಿಗಳು-01

ದಿನಾಂಕ 03-12-2015 ರಂದು ಬೆಳಗ್ಗೆ 10.00 ಗಂಟೆಗೆ ಔರಾದ (ಬಾ) ತಾಲೂಕಿನ ವಡಗಾಂವ ಶಾಖೆಯ ಗ್ರಾಮ ಪಂಚಾಯತ ಕಾರ್ಯಾಲಯದಲ್ಲಿ ಶಾಖೆಯ ವಿವಿಧ ಗ್ರಾಮಗಳ ಜನರ ಸಮ್ಮುಖದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡುವಳಿಗಳು.

ಪ್ರಾರಂಭದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಗು.ವಿ.ಸ.ಕಂ.ನಿ ಔರಾದ ರವರ ಜನ ಸಂಪರ್ಕ ಸಭೆಗೆ ಆಗಮಿಸಿದ ಎಲ್ಲಾ ಗ್ರಾಹಕರನ್ನು ಸ್ವಾಗತಿಸಿ ಈ ಕೆಳಗಿನಂತೆ ಕಾರ್ಯ ಕಲಾಪಗಳನ್ನು ಆರಂಭಿಸಿದರು.

ಮೊದಲನೆಯದಾಗಿ ವಡಗಾಂವ ಗ್ರಾಮದ ಗ್ರಾಮ ಪಂಚಾಯತ ಅಧ್ಯಕ್ಷರಾದ ಶ್ರೀ ಸಿದ್ಧಯ್ಯಾ ಸ್ವಾಮಿ ಮಠಪತಿ ಮತ್ತು ಉಳಿದ ಎಲ್ಲಾಗ್ರಾಹಕರು ವಡಗಾಂವ ಶಾಖೆಗೆ ಮಂಜೂರಾದ 33/11 ಕೆವಿ ಸಬ್ ಸ್ಟೇಷನ್‌ನ್ನು ಆದಷ್ಟು ಬೇಗನೆ ಕಾರ್ಯ ಕಲಾಪಕ್ಕೆ ತಂದು ಶಾಖೆಯ ಎಲ್ಲಾ ಗ್ರಾಮಗಳಿಗಾಗುತ್ತಿರುವ ಕಡಿಮೆ ವೋಲ್ಟೆಜ್ ಸಮಸ್ಯೆಯನ್ನು ನಿವಾರಿಸಬೇಕೆಂದು ಮನವಿ ಪತ್ರದ ಮೂಲಕ ಕೇಳಿಕೊಂಡಿರುತ್ತಾರೆ.

ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ವಿವರಣೆ ನೀಡಿ ವಡಗಾಂವ ಶಾಖೆಯ ಎಲ್ಲಾ ಗ್ರಾಮಗಳಿಗೆ ಬಹಳ ದಿನಗಳಿಂದ ಆಗುತ್ತಿರುವ ಕಡಿಮೆ ವೋಲ್ಟೆಜ್ ಸಮಸ್ಯೆಯನ್ನು ಶಾಖೆಗೆ ಮಂಜೂರಾದ 33/11 ಕೆವಿ ಸ್ಟೇಷನ್ ಕಾರ್ಯ ಮುಗಿಯುವ ವರೆಗೆ ಸಂತಪೂರನಿಂದ ಬರುವ 11 ಕೆವಿ ವಡಗಾಂವ ಫೀಡರ್ ನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ನೀಡಿದರು.

ಬಹಳ ಅಂತರವಿರುವ ಕಂಬಗಳ ಮಧ್ಯದಲ್ಲಿ ಒಂದರಂತೆ ಒಟ್ಟು 145 ವಿದ್ಯುತ್ ಕಂಬಗಳು ಈಗಾಗಲೇ ಹಾಕಿಸಲಾಗಿದೆ.

ಕಾರಪಾರ ಥಾಂಡಾದಿಂದ ಮಾಣಿಕ ಥಾಂಡಾ ವರೆಗೆ 22 ಕಂಬಗಳು ಮತ್ತು ಪದೇ ಪದೇ ಹೆಚ್ಚಿನ ವಿದ್ಯುತ್ ಭಾರದಿಂದ ಕಡಿದು ಬೀಳುತ್ತಿರುವ ನಂ 4/2 ಎ.ಸಿ.ಎಸ್.ಆರ್ ವಾಯರನ್ನು ಬದಲಾಯಿಸಿ ರ್‍ಯಾಬಿಟ್ ವಾಯರ್ 7 ಕಿ.ಮಿ ವರೆಗೆ ಅಳವಡಿಸಲಾಗಿದೆ.

ಮತ್ತು ಲೈನ್ ಫಾಲ್ಟ್‌ನಿಂದಾಗುವ ತೊಂದರೆಯನ್ನು ಬೇಗ ಸರಿಪಡಿಸಲು ವಡಗಾಂವ ಫೀಡರ್‌ನಲ್ಲಿ ಒಟ್ಟು 7 G.O.S ಗಳನ್ನು ಅಳವಡಿಸಲಾಗಿದೆ.

ಈ ಮೇಲಿನ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರ ಪದೇ ಪದೇ ಎಲ್.ಸಿ ತೆಗೆದುಕೊಳ್ಳುವುದು ಕಡಿಮೆ ವಿದ್ಯುತ್‌ನ ತೊಂದರೆಯನ್ನು ಕಡಿಮೆ ಮಾಡಿರುವುದಾಗಿ ಶಾಖೆಯ ಜನರು ಒಪ್ಪಿಕೊಂಡಿರುತ್ತಾರೆ.

1) 33/11 ಕೆವಿ ಸ್ಟೇಷನ್ನಿನ ಕಾಮಗಾರಿ ತುರ್ತಾಗಿ ಮುಗಿಸಲು ಕೋರಿ ಅರ್ಜಿ ನೀಡಿರುತ್ತಾರೆ.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) 2016 ರ ಡಿಸೆಂಬರ್ ರವರೆಗೆ ಪೂರ್ಣಗೊಳಿಸಲಾಗುವುದೆಂದು ಭರವಸೆ ನೀಡಿರುತ್ತಾರೆ.

2) ಮಲ್ಲಪ್ಪಾ ಎಸ್ ನೇಳಗೆ ಸಾ॥ ವಡಗಾಂವ ರವರು ಅವರ ಪ್ಲಾಟ್ ಮೇಲೆ R.G.G.V.Y ಅಡಿಯಲ್ಲಿ ಹಾಕಿರುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕ್ರಮ: ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಶಾಖಾಧಿಕಾರಿ ವಡಗಾಂವ ರವರಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡಲು ಸೂಚಿಸಲಾಗಿದೆ.

3) ಚಂದರ ತಂದೆ ಮೇಘಾ ಸಾ॥ ಬಿ.ಪಿ.ಎನ್ ಥಾಂಡಾ ರವರು ನಮ್ಮ ಥಾಂಡಾಕ್ಕೆ ಪ್ರತ್ಯೇಕ ವಿದ್ಯುತ್ ಪರಿವರ್ತಕ ಅಳವಡಿಸಲು ಮತ್ತು ಹಳೆಯ ವಾಯರ್‌ನ್ನು ಬದಲಾಯಿಸಲು ಕೋರಿ ಅರ್ಜಿ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರು ವಡಗಾಂವ ಶಾಖೆಯ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಥಾಂಡಾದಲ್ಲಿರುವ ಅಧಿಕೃತ ಸ್ಥಾವರಗಳಿಗನುಣವಾಗಿ ಪ್ರತ್ಯೇಕ ಟಿ.ಸಿ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು.

4) ವಡಗಾಂವ ಗ್ರಾಮದ ಜನತಾ ಕಾಲೋನಿ ನಿವಾಸಿಗಳಿಂದ ಅವರ ಓಣಿಯ ರಸ್ತೆಯ ಮಧ್ಯೆ ಭಾಗದಲ್ಲಿರುವ ವಿದ್ಯುತ್ ಕಂಬವನ್ನು ಬೇರೆ ಕಡೆ ಸ್ಥಳಾಂತರಿಸಲು ಕೋರಿ ಅರ್ಜಿ

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರು ಶಾಖಾಧಿಕಾರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು.

5) ವಡಗಾಂವ ಪಂಚಾಯತ ಸದಸ್ಯರಾದ ಶ್ರೀ ಬಾಬು ತಂದೆ ನರಸಪ್ಪಾ ಎಂಬುವವರು ಕ್ರಿಶ್ಚಿಯನ್ ಓಣಿಯಲ್ಲಿ ಮನೆಗಳ ಮೇಲಿಂದ ಹಾಯ್ದು ಹೋಗಿರುವ ವಾಯರ್‌ಗಳನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಕುರಿತು ಅರ್ಜಿ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಶಾಖಾಧಿಕಾರಿ ವಡಗಾಂವ ರವರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು.

6) ವಡಗಾಂವ ಶಾಖೆಯ ಕಂದಗೂಳ ಗ್ರಾಮದ ನಿವಾಸಿಯಾದ ಶ್ರೀ ವೈಜನಾಥ ತಂದೆ ಬೀರಗೊಂಡಾ ಅವರ ಮನೆಯ ಮೇಲಿಂದ ಹಾಯ್ದು ಹೋಗಿರುವ ವಾಯರ್ ಗಳನ್ನು ಸ್ಥಳಾಂತರಿಸಲು ಕೋರಿ ಅರ್ಜಿ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರು ಶಾಖಾಧಿಕಾರಿ ರವರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿರುತ್ತಾರೆ.

7) ವಡಗಾಂವ ಗ್ರಾಮದ ಸಂಗಮೇಶ್ವರ ಓಣಿಯ ಜನರು ಓಣಿಯ ರಸ್ತೆ ಮಧ್ಯೆಯಲ್ಲಿರುವ ವಿದ್ಯುತ್ ಕಂಬ ಮುರಿದ ಹಳೆಯ ಕಂಬವಿದ್ದು ಅದನ್ನು ಬದಲಾಯಿಸಿ ಬೇರೆ ಕಡೆ ಸ್ಥಳಾಂತರಿಸಲು ಕೋರಿ ಅರ್ಜಿ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಶಾಖೆಯ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

8) ವಡಗಾಂವ ಗ್ರಾಮದ ಎಲ್ಲಾ ವಿದ್ಯುತ್ ಗ್ರಾಹಕರು ವಡಗಾಂವ ರವರು ತಮ್ಮ ಊರಿನಲ್ಲಿ ಆಗುತ್ತಿರುವ ವಿದ್ಯುತ್ ತಾರತಮ್ಯವನ್ನು ಸರಿಪಡಿಸುವ ಕುರಿತು.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ), ಶಾಖಾಧಿಕಾರಿಗೆ ಸ್ಥಳ ಪರೀಶಿಲನೆ ಮಾಡಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

9) ವಡಗಾಂವ ಶಾಖೆಯ ಲಾಲು ನಾಯಕ ಥಾಂಡಾದಲ್ಲಿ ವಿದ್ಯುತ್ ಕಂಬಗಳು ಹಳೆಯದಾಗಿದ್ದು ಅವುಗಳು ಬದಲಾಯಿಸಲು ಮತ್ತು ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಕುರಿತು.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರು ಲಾಲು ಥಾಂಡಾ ಗ್ರಾಮದ ಜನರನ್ನುದ್ದೇಶಿಸಿ ಗ್ರಾಮದ ಎಲ್ಲಾ ಜನರು ವಿದ್ಯುತ್ ಮಾಪಕ ಅಳವಡಿಸಿಕೊಂಡ ನಂತರ ಹೊಸ ಟ್ರಾನ್ಸ್‌ಫಾರ್ಮರ್ ಅಳವಡಿಸುವದಾಗಿ ಭರವಸೆ ನೀಡಿರುತ್ತಾರೆ.

10) ವಡಗಾಂವ ಶಾಖೆಯ ಚಿಕ್ಲಿ (ಜೆ) ಗ್ರಾಮದ ಶ್ರೀಮತಿ ವಿಮಲಾಬಾಯಿ ಗಂಡ ಮಾಧು ರಾಠೋಡ ರವರ ಹೊಲದಲ್ಲಿರುವ ಗಂಗಾಕಲ್ಯಾಣ ಯೋಜನೆಯಲ್ಲಿ ಹಾಕಿರುವ ವಿದ್ಯುತ್ ಕಂಬಗಳು ಮುರಿದಿದ್ದು ಅವುಗಳನ್ನು ಬದಲಾಯಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ರವರು ಶಾಖಾಧಿಕಾರಿಗೆ ಸ್ಥಳ ಪರಿಶೀಲನೆ ಮಾಡಿ ಸೂಕ್ತ ಅಂದಾಜು ಪಟ್ಟಿ ತಾಯಾರಿಸಲು ಸೂಚಿಸಿರುತ್ತಾರೆ.

11) ವಡಗಾಂವ ಶಾಖೆಯ ಚಿಕ್ಲಿ (ಜೆ) ಗ್ರಾಮ ವ್ಯಾಪ್ತಿಯ ವಿಜನಾಥ ತಾಂಡಾದಲ್ಲಿ ಟಿ.ಸಿ ಅಳವಡಿಸಬೇಕೆಂದು ಕೋರಿ ಅರ್ಜಿ.

ಕ್ರಮ : ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಗ್ರಾಮ ಜನರನ್ನುದ್ದೇಶಿಸಿ ಥಾಂಡಾದಲ್ಲಿ ಎಲ್ಲರೂ ವಿದ್ಯುತ್ ಮಾಪಕಗಳನ್ನು ಅಳವಡಿಸಿಕೊಂಡ ನಂತರ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ ಮುಂದಿನ 15 ದಿನಗಳಲ್ಲಿ ಸೂಕ್ತ ಅಂದಾಜು ಪಟ್ಟಿಯನ್ನು ತಯಾರಿಸಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಔರಾದ (ಬಾ) ರವರಿಗೆ ಕಳುಹಿಸಬೇಕೆಂದು ವಡಗಾಂವ ಶಾಖಾಧಿಕಾರಿಗೆ ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ)
ಕಾ.ಮತ್ತು.ಪಾ ಉಪ-ವಿಭಾಗ ಗು.ವಿ.ಸ.ಕಂ
ಔರಾದ.

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಅಭಿಯಂತರರು ವೃತ್ತ ಕಛೇರಿ ಗು.ವಿ.ಸ.ಕಂ.ನಿ ಬೀದರ ರವರ ಮಾಹಿತಿಗಾಗಿ
2. ಮಾನ್ಯ ಕಾರ್ಯ ನಿರ್ವಾಹಕ ಅಭಿಯಂತರರು (ವಿ) ಕಾ ಮತ್ತು ಪಾ ವಿಭಾಗ ಗು.ವಿ.ಸ.ಕಂ.ನಿ
[illegible]